ಇರಬೇಕು! ಆದರೆ ಯಾವ ಶಾಖೆ? ಅದಕ್ಕೆ ಉತ್ತರ ಆ ಕಮಲ! ಆ ಪಾರ್ಕಿನ ಎದುರಲ್ಲೇ ಇದ್ದ 'ಕಮಲ ಸಂಕೀರ್ಣ'ದಲ್ಲಿದ್ದ ಆ ಬ್ಯಾಂಕಿನ ಶಾಖೆಯಲ್ಲಿರಬೇಕೆಂದು ಊಹಿಸಿ, ಅಲ್ಲಿ ಹೋಗಿ ಮ್ಯಾನೇಜರರಲ್ಲಿ ವಿಚಾರಿಸಿದೆ. ಅವರು ಅಲ್ಲಿ ನಿಮ್ಮ ಲಾಕರ್ ಇರುವುದನ್ನು ತಿಳಿಸಿದರು. ಲಾಕರಿನಲ್ಲಿ ಉಯಿಲು ಇದೆಯಲ್ವೇ?"

"ಎಲ್ಲಾ ನನ್ನ ಹಣೆಬರಹ, ಸಾರ್. ನನ್ಗೆ ಹೃದಯದ ಕಾಯಿಲೆ ಇದೆ. ಒಮ್ಮೆ ಆಂಜಿಯೋಪ್ಲಾಸ್ಟಿ ಆಗಿದೆ. ಯಾವಾಗ ಸಾಯ್ತೀನಿ ಅಂತ ಗೊತ್ತಿಲ್ಲ. ನನ್ನ ಮಕ್ಕಳು ನಾಲಾಯಕ್. ನನ್ನ ತಂಗಿ ಮಗಳು ನನ್ನನ್ನು ಚೆನ್ನಾಗಿ ನೋಡಿಕೊಂಡಿದ್ದಳು. ಈಗ ಅವಳನ್ನೂ ನಮ್ಮ ಮನೆಗೆ ಬರಲು ಬಿಡ್ತಿಲ್ಲ. ಅವ್ಳಿಗೆ ಆಸ್ತಿಲಿ ಪಾಲು ಕೊಡಬೇಕೆನ್ನುವುದು ನನ್ನ ಇಚ್ಛೆ. ಆದರೆ ಮಕ್ಕಳು ವಿರೋಧಿಸ್ತಾರೆ. ಅದಕ್ಕೇ ರಹಸ್ಯವಾಗಿ ಇನ್ನೊಂದು ಹೊಸ ಉಯಿಲು ಮಾಡ್ದೆ. ಆ ಬಗ್ಗೆ ಯಾರಿಗೂ ಗೊತ್ತಾಗಬಾರದೆಂಬುದು ನನ್ನ ಉದ್ದೇಶ. ಗೊತ್ತಾದ್ರೆ ಮಕ್ಕಳು ನನ್ನಿಂದ ಇನ್ನೊಂದು ಉಯಿಲು ಮಾಡಿಸ್ತಾರೆ. ಅದನ್ನ ಬ್ಯಾಂಕಿನ ಲಾಕರಲ್ಲಿ ಇಟ್ಟೆ. ನನ್ನ ಸಂಬಂಧಿಯೊಬ್ಬ ಅಲ್ಲಿ ಜವಾನನಾಗಿದ್ದಾನೆ. ಲಾಕರ್ ಕೀ ಆತನಲ್ಲೇ ಇದೆ. ನಾನು ಅಥವಾ ಸುಬ್ಬಯ್ಯ ಬಂದರೆ, ಅದನ್ನು ನೀಡುವಂತೆ ಆತನಿಗೆ ಹೇಳಿದ್ದೇನೆ. ಸುಬ್ಬಯ್ಯನನ್ನು ಉಯಿಲಿನ ನಿರ್ವಾಹಕನಾಗಿ ನೇಮಿಸಿದ್ದೆ. ಆತ ವಿದೇಶಕ್ಕೆ ಹೋಗಿದ್ದಾನೆಂದು ಭಾವಿಸಿ, ಆತನಿಗೊಂದು ಸಂದೇಶ ಕಳಿಸಿದೆ, 'ಅದರ ಸುಳಿವು ನನ್ನ ವಾಕಿಂಗ್ ಸ್ಟಿಕ್ಕಿನಲ್ಲಿದೆ... ನೋಡು ನಾನು ಇಲ್ಲವಾದಾಗ!' ಅಂತ. ನಾನು ಸತ್ತಾಗ ಆತನಿಗೆ ಉಡುಗೊರೆಯೊಂದನ್ನು ಕೊಡ್ತೇನೆ, ಅದು ಎಲ್ಲಿದೆ ಅನ್ನುವ ಬಗ್ಗೆ ಸುಳಿವು ನೀಡುತ್ತೇನೆ ಅಂತ ಹೇಳಿದ್ದೆ. ಅದರ ಬಗ್ಗೆ ಹೇಳಲು ಒತ್ತಾಯಿಸಬೇಡ, ಅದು ತನ್ನ ಮಕ್ಕಳಿಗೂ ಗೊತ್ತಾಗಲೂಬಾರದು ಎಂದು ಕೂಡಾ ಹೇಳಿದ್ದೆ. ಆತನಿಗೂ ಉಯಿಲಿನ ಸುಳಿವಿರಲಿಲ್ಲ. ಯಾಕೆ ಗೊತ್ತೆ? ಸುಬ್ಬಯ್ಯನಿಗೆ ಕುಡಿತದ ದೌರ್ಬಲ್ಯವಿತ್ತು. ಕುಡಿದಾಗ, ಆತನ ಬಾಯಿಯಲ್ಲಿ ರಹಸ್ಯ ಉಳಿಯದು. ನಮ್ಮ ಒಬ್ಬ ಮಿತ್ರರಲ್ಲಿ ಒಬ್ಬನ ಮಗಳು ನನ್ನ ಮಗನ ಹೆಂಡತಿ. ಸುಬ್ಬಯ್ಯ ಎಲ್ಲಿಯಾದರೂ ಕುಡಿದು ಉಯಿಲಿನ ಬಗ್ಗೆ ಹೇಳಿದರೆ ಅಪಾಯವೆಂದು, ಉಡುಗೊರೆ ಅಂತ ಸುಳ್ಳು ಹೇಳಿದ್ದೆ. ಅವನಿಗೊಂದು ಲಕ್ಷ ರೂಪಾಯಿ ಕೊಡುಗೆಯೂ ಉಯಿಲಿನಲ್ಲಿದೆ. ಆದರೆ ಮಕ್ಕಳು ಆತನ ಮೇಲೆ ಹಲ್ಲೆ ನಡೆಸಿದಾಗ ಗಾಬರಿಯಾಯಿತು. ಆತ ಬ್ಯಾಂಕಿನ ಬಗ್ಗೆ ಹೇಳಿದರೆ, ಅಲ್ಲಿರುವ ನನ್ನ ಸಂಬಂಧಿ ಲಾಕರ್ ವಿಷಯವನ್ನು ಮಕ್ಕಳಿಗೆ ಹೇಳ್ತಾನೆ. ಅಲ್ಲಿಗೆ ಉಯಿಲು ಬಯಲಾಗುತ್ತದೆ ಎಂದು ಭಾವಿಸಿದೆ. ದುರದೃಷ್ಟವಶಾತ್, ನಾನು ಅಂಗಡಿಯಲ್ಲಿ ವಾಕಿಂಗ್ ಸ್ಟಿಕ್ ಬಿಟ್ಟು ಬಂದೆ. ಚೆಂದಕ್ಕಿಗೆ ಅದನ್ನು ತರಲು ಹೇಳಿದ್ದೆ. ಆದರೆ ಆತ ನನ್ನ ಮಕ್ಕಳಿಗೆ ಫೋನು ಮಾಡಿ, ವಾಕಿಂಗ್ ಸ್ಟಿಕ್ ಬಗ್ಗೆ ಹೇಳಿದ್ದನ್ನು ಕೇಳಿಸಿಕೊಂಡೆ. ನಾನು ಅಂಗಡಿಯಿಂದ ತಂದಿದ್ದ ವಾಕಿಂಗ್ ಸ್ಟಿಕ್ಕನ್ನು ಬೇಲಿಯ ಬದಿಯಲ್ಲಿ ಕಂಡಾಗ, ಚೆಂದಕ್ಕಿ ಅಂಗಡಿಗೆ ಹೋಗಿಲ್ಲವೆಂದು ತಿಳಿಯಿತು. ಆವಾಗ್ಲೇ ನನ್ಗೆ ನನ್ ಮಕ್ಳಿಗೆ ಅನುಮಾನ ಬಂದಿದೆ ಅಂತ ಅರಿವಾಗಿದ್ದು. ಸುಬ್ಬಯ್ಯನ ಮೇಲೆ ಹಲ್ಲೆ ಮಾಡಿದ್ದನ್ನ ಆತನ ಹೆಂಡ್ತಿ ಹೇಳ್ದಾಗ ಭಯವಾಯಿತು. ಹಲ್ಲೆಕೋರರು ನನ್ನ ಮಕ್ಳೇ ಅಂತಲೂ ಗೊತ್ತಾಯಿತು. ಅವರು ಹಲ್ಲೆ ಮಾಡಿಯಾರು ಅಂತ ಇಲ್ಲಿಗೆ ಬಂದು ನಿಂತೆ. ಬಹುಶಃ ಮಕ್ಕಳಿಗೆ ನಾನು ಕಳಿಸಿದ ಮೆಸೇಜ್ ಗೊತ್ತಾಗಿರಬೇಕು. ಆದರೆ ನನ್ನ ಮೊಬೈಲು ಲಾಕ್ ತೆಗೆಯಲು ನನ್ನ ಬೆರಳಚ್ಚು ಬೇಕಾಗಿದ್ದರೂ, ಅವರಿಗೆ ವಾಕಿಂಗ್ ಸ್ಟಿಕ್ ಬಗ್ಗೆ ಹೇಗೆ ಗೊತ್ತಾಯಿತು ಅಂತ ಅರ್ಥವಾಗ್ತಿಲ್ಲ."

"ಬಹುಶಃ ನೀವು ನಿದ್ರಿಸಿರುವಾಗ, ಚೆಂದಕ್ಕಿ ನಿಮ್ಮ ಬೆರಳಚ್ಚು ಉಪಯೋಗಿಸಿ, ಲಾಕ್ ತೆಗೆದು ನಿಮ್ಮ ಫೋನು ಪರಿಶೀಲಿಸುತ್ತಿರಬೇಕು! ನೀವು ಮೆಸೇಜ್ ಡಿಲೀಟ್ ಮಾಡದಿದ್ದುದು ತಪ್ಪು. ಬಿದ್ದಪ್ಪ, ನೀನು ಹೇಳಿದಂತೆ ಸುಬ್ಬಯ್ಯ ಮಾಟ ಮಾಡಿದನೇ ಅಂತ ವಿಚಾರಿಸಲಿಕ್ಕೆ ವಾಕಿಂಗ್ ಸ್ಟಿಕ್ ಅಗತ್ಯವಿಲ್ಲ, ಅಲ್ವೇ? ನೇರವಾಗಿಯೇ ಕೇಳಬಹುದಿತ್ತು. ಸುಬ್ಬಯ್ಯನಿಗೆ ಆ ಚಿತ್ರಗಳ ರಹಸ್ಯ ಬಿಡಿಸುವ ಸಾಮರ್ಥ್ಯವಿದೆಯೆ?"

